Vol-13
1-P-2

R No KRNN 12

29 - 1- 1975

ಸ್ವರ್ಣ ಮಹೋತ್ಸವ ನೆನಪಿನಿಂದ ಕೂಡಿದ ಪತ್ರಿಕೆ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily
Mysore 4

- For Influential Publicity -

ಸಂಪಾದಕರು ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ | 8 ಪುಟ

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್

ಹೋಟೆಲು ತಿಂಡಿ ಬೆಲೆ ಹತೋಟಿಗೆ ಮನವಿ

ಮೈಸೂರಿನ ಮೃಗಾಲಯ

ಈಗಾಗಲೇ 40 ಎಕರೆ ಭೂಪ್ರದೇಶವನ್ನು ಮೃಗಾಲಯದ ವ್ಯಾಪ್ತಿಗೆ ಒಳಪಡಿಸಲಾಗಿದೆ ; ಕಾರಂಜಿ ಕೆರೆಯ 90 ಎಕರೆಯೂ ಸೇರಿದಂತೆ ಇನ್ನೂ 185 ಎಕರೆ ಭೂಪ್ರದೇಶವನ್ನು ಇದರ ವ್ಯಾಪ್ತಿಗೊಳಪಡಿಸುವ ಕಾರ್ಯ ಮುಕ್ತಾಯದ ಹಂತದಲ್ಲಿದೆ

ಈಗಿನ ಕಾರಂಜಿ ಕೆರೆಯನ್ನು ಪಕ್ಷಿಧಾಮವಾಗಿ ಅಭಿವೃದ್ಧಿಗೊಳಿಸಿ ಕೆರೆಯಲ್ಲಿ ಹಲವಾರು ಕೃತಕ ದ್ವೀಪಗಳನ್ನು ನಿರ್ಮಿಸಲಾಗುವುದು ; ಇಲ್ಲಿ ಪಕ್ಷಿಗಳು ಸ್ವತಂತ್ರವಾಗಿ ಜೀವಿಸಲು ಅವಕಾಶ ಕಲ್ಪಿಸಲಾಗುವುದು ; ಇದು ಹಕ್ಕಿ ಪಕ್ಷಿಗಳು ಗೂಡು ಕಟ್ಟಲು ಆಕರ್ಷಿಸುವುದು ಮಾತ್ರವಲ್ಲ, ಪಕ್ಷಿಧಾಮಕ್ಕೆ ವಿದೇಶ ಪಕ್ಷಿಗಳನ್ನು ಆಕರ್ಷಿಸಲೂ ಸಹಕಾರಿಯಾಗುತ್ತದೆ

ನಮ್ಮ ಪರಂಪರೆಯ ವಿವಿಧ ಚಿತ್ರಗಳನ್ನು ತೋರುವ ಯಕ್ಷಾಚಿತ್ರಗಳಿರುವ ಒಂದು ಜಾಲವನವನ್ನು ರೂಪಿಸಲು ಯೋಚಿಸಲಾಗಿದೆ ; ರಾಮಾಯಣ ಹಾಗೂ ಮಹಾಭಾರತದ ಕುತೂಹಲಕಾರಕ ಪೃಶ್ಯಗಳನ್ನೂ, ವಿವಿಧ ಪ್ರಾಣಿಗಳು ಮೈತ್ರಿಯಿಂದಿರುವ ಆಶ್ರಮಗಳನ್ನೂ ರೂಪಿಸಲಾಗುವುದು ; ಮಕ್ಕಳು ಆಟವಾಡಿ ನಲಿದಾಡಿಕೊಳ್ಳಲು ಅವಕಾಶವಾಗುವಂತೆ ಒಂದು ಆಟದ ಮೈದಾನವನ್ನು ರಚಿಸಲಾಗುವುದು.

ಸುಸಜ್ಜಿತ ಪ್ರಯೋಗಶಾಲೆಯಿಂದ ಕೂಡಿದ ಒಂದು ಸಂಶೋಧನಾ ಕೇಂದ್ರ ಮತ್ತು ದೀರ್ಘ ಕಾಲದಿಂದ ಅಗತ್ಯವೆಂದು ಕಂಡುಬಂದಿರುವ ಒಂದು ಪಶುವೈದ್ಯ ಶಾಲೆಯನ್ನು ಸ್ಥಾಪಿಸಲಾಗುವುದು.

ಈ ಮೃಗಾಲಯದಲ್ಲಿ ನಾಗರಹಾವಿನ ಕಣ್ಣಿನ ಪೊರೆಗಳನ್ನು ತೆಗೆಯಲಾಗಿದೆ ಮತ್ತು ಸಣ್ಣ ಪ್ರಾಣಿಗಳ ಸಾಕುವಿಕೆಯ ಬಗ್ಗೆ ದತ್ತಾಂಶಗಳನ್ನು ಸಂಗ್ರಹಿಸಿರುವುದೂ ಇಲ್ಲಿಯೇ.

[ಹಿಂದಿನ ಪುಟ ನೋಡಿ

★

ಜೆ ಪಿ ಚಳುವಳಿಗೆ ಬೆಂಬಲ

ಹುಬ್ಬಳ್ಳಿ - ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು ಶ್ರೀ ಜಯಪ್ರಕಾಶನಾರಾಯಣರ ಚಳವಳಿಗೆ ಬೆಂಬಲ ನೀಡಲು ಪ್ರತಿಜ್ಞೆ ಮಾಡಿದೆ.

★ ಬೆಂಗಳೂರು— 68 ನೇ ಕರ್ನಾಟಕ ಲಾಟರಿ ಡ್ರಾ ಮೈಸೂರಿನಲ್ಲಿ ಫೆಬ್ರವರಿ 16ರಂದು ನಡೆಯುವುದು.

Remember

You are quite safe in your dealings with

Bank Road Bahusar

For Note for Genuine Good Business

ರಿಕ್ಷಾ ಎಳೆಯುವವರಿಂದ ಧ್ವಜಾರೋಹಣ

ಪಾಟ್ನಾ— ಬೀಹಾರಿನ 10 ತಿಂಗಳ ಚಳವಳಿಯ ಬೆಂಬಲಿಗರು ಪ್ರಜಾಕಾರಿ ಗಣರಾಜ್ಯ ದಿನೋತ್ಸವವನ್ನು ಬಹಿಷ್ಕರಿಸಿ ರಾಜ್ಯಾದ್ಯಂತ ಪ್ರತಿ ಗಣಂತ್ರೋತ್ಸವ ನಡೆಸಿದರು – ಒಂದೆಡೆ ರಿಕ್ಷಾ ಎಳೆಯುವವರೇ ಧ್ವಜಾರೋಹಣ ಮಾಡಿದರು – ಮತ್ತೊಂದೆಡೆ ಭಿಕ್ಷುಕರೇ ಅಧ್ಯಕ್ಷತೆ ವಹಿಸಿದ್ದರು – ಖ್ಯಾತ ಹಿಂದಿ ಲೇಖಕರೂ ಸಭೆಗಳ ಅಧ್ಯಕ್ಷತೆ ವಹಿಸಿದ್ದರು – ಸಭೆಗಳಲ್ಲಿ ಬಹುಸಂಖ್ಯೆ ಭಾಗವಹಿಸಿದ್ದರು.

●

ದೇಶಾಭಿಮಾನ ಹೇಳಿಕೆ

ಬೆಳಗಾಂ— ದೇಶದ ಹಿತಕ್ಕೆ ವಿರುದ್ಧವಾಗಿ ಆಡಳಿತ ಪಕ್ಷ ಮಾಡುತ್ತಿರುವುದನ್ನು ಜನರು ಧೈರ್ಯವಾಗಿ ಆದರೆ ಅಹಿಂಸಾ ರೀತಿಯಲ್ಲಿ ವಿರೋಧಿಸಬೇಕೆಂದು ಹಳೇ ಕಾಂಗ್ರೆಸ್ ನಾಯಕ ಶ್ರೀ ಮೊರಾರ್ಜಿ ದೇಸಾಯಿ ಒಂದು ಸಮಾರಂಭದಲ್ಲಿ ಹೇಳಿದರು.

●

ಪ್ರಜಾತಂತ್ರ !

ಕಲ್ಕತ್ತಾ— ಪಶ್ಚಿಮ ಬಂಗಾಳ ವ್ಯವಸಾಯ ಕಾರ್ಮಿಕರು ಕೆಲಸವಿಲ್ಲದೆ ಮತ್ತು ಬಡತನದ ನಿಮಿತ್ತ " ಬೆಯಿಸಿದ ಗೋಧಿ, ಒಂದು ಚಿಟಿಕೆ ಉಪ್ಪು " ತಿಂದು ಜೀವಿಸುತ್ತಿರುವರು.

●

ಜೀವಸಹಿತ ಸುಡಲ್ಪಟ್ಟರು

ಪಾಟ್ನಾ— ಆದಿವಾಸಿಗಳು ಮತ್ತು ಆದಿವಾಸಿಗಳೇತರರಲ್ಲಾದ ಘರ್ಷಣೆಯಲ್ಲಿ 10 ಜನ ಸುಡಲ್ಪಟ್ಟಿ ಹಲವು ಮನೆಗಳುಬೆಂಕಿಗೆ ಆಹುತಿಯಾದವು.

●

ಶ್ರೀ ಶೃಂಗೇರಿ ಜಗದ್ಗುರುಗಳವರು.

ಮೈಸೂರು— ಶ್ರೀ ಶೃಂಗೇರಿ ಹಿರಿಯ ಮತ್ತು ಕಿರಿಯ ಜಗದ್ಗುರುಗಳು ಮಂಗಳವಾರ ಆಗಮಿಸಿದಾಗ ಭವ್ಯವಾಗಿ ಸ್ವಾಗತಿಸಲಾಯಿತು - ಗುರುವಾರ ಇಲ್ಲಿಂದ ಪ್ರಯಾಣ ಬೆಳೆಸುವರು.

ತಿಂಡಿ ಬೆಲೆ

ಬೆಂಗಳೂರು ಇಲ್ಲಿಯ ಹೋಟೆಲಿನವರ ಸಂಘದಲ್ಲಿ ಆಹಾರ ಮತ್ತು ಸಾಗರೀಕ ಪೂರೈಕೆ ಇಲಾಖೆಯ ಕಾರ್ಯದರ್ಶಿ ಶ್ರೀ. ಪದ್ಮನಾಭರವರು ಮಾಡಿದ ಭಾಷಣದಲ್ಲಿ ಹೋಟೆಲಿನವರು ಬೆಲೆ ಹತೋಟಿ ಇಡಬೇಕೆಂದು ವಿನಂತಿಸಿದರು

★

ಟೇಪ್ ರೆಕಾರ್ಡ್ ಹಾಡಿಸಲಾಯಿತು

ಅಲಹಾಬಾದು— ಜುನಾವಣೆ ತಕರಾರು ಅರ್ಜಿ ಸಂಬಂಧದಲ್ಲಿ ಹೈಕೋರ್ಟಿನಲ್ಲಿ, ಪ್ರಧಾನಿ ಇಂದಿರಾಗಾಂಧಿಯವರು 1970ನೇ ಡಿಸೆಂಬರು ತಾ|| 29 ರಂದು ನಡೆಸಿದ ಪತ್ರಿಕಾಗೋಷ್ಠಿಯ ಟೇಪ್‌ರೆಕಾರ್ಡ್ ಹಾಡಿಸಲಾಯಿತು.

★

ಮಗುವನ್ನು ಇಲಿಗಳು ತಿಂದವು

ಕಲ್ಕತ್ತಾ— ಚಿತ್ತರಂಜನ ಶಿಶು ಸಹಸ್ಪತ್ರೆಯಲ್ಲಿ ಒಂದು ಮುಖಪಟ ಭಾಗವನ್ನೂ ತೋಳುಗಳನ್ನೂ ಇಲಿಗಳು ತಿಂದವು ; ಮಗು ಸತ್ತಿತು.

★

ಸಂಸಾರದ ಆದಾಯ

ಬೊಂಬಾಯಿ— ಒಂದು ಸಂಸಾರಕ್ಕೆ ವರ್ಷಕ್ಕೆ ಕನಿಷ್ಠ ರೂ. 3000 ಆದಾಯವಾಗುವಂತೆ ಯೋಜನೆಗೆ ಶ್ರೀ ಜಯಪ್ರಕಾಶ ನಾರಾಯಣರು ಕರೆಕೊಟ್ಟಿದ್ದಾರೆ.

★

ಅಸ್ತಿ ಪರಿಮಿತಿ

ನವದೆಹಲಿ— ಪಟ್ಟಣಗಳಲ್ಲಿಯ ಅಸ್ತಿ ಪರಿಮಿತಿ ಮುಂದೆ ಸಿದ್ಧವಾಗುತ್ತಿದೆ ಎಂದು ತಿಳಿಸಲಾಗಿದೆ

●

ಅಕ್ಕಿ ವಶ

ಮೈಸೂರು— ಪರ್ಮಿಟ್ ಇಲ್ಲದೆ ಮೈಸೂರಿಂದ ಬೆಂಗಳೂರಿಗೆ ಲಾರಿಯಲ್ಲಿ ಸಾಗಿಸಲಾಗುತ್ತಿದ್ದ 96 ಚೀಲ ಅಕ್ಕಿಯನ್ನು ವಶಪಡಿಸಿಕೊಂಡು, ಡ್ರೈವರನ್ನು ಬಂಧಿಸಲಾಯಿತು.

(2)

ಅರಮನೆಯಿಂದ ವರ್ಗಾವಣೆಯ ಸಮಯದಲ್ಲಿ 98 ಪ್ರಭೇದಗಳು, 750 ಪ್ರಾಣಿ ಪಕ್ಷಿಗಳನ್ನು ಪಡೆದಿತ್ತೆ ಮೃಗಾಲಯ ಇಂದು 200 ಪ್ರಭೇದಗಳ 2000 ಪ್ರಾಣಿ ಪಕ್ಷಿಗಳನ್ನೂ ಪ್ರದರ್ಶಿಸುತ್ತಿದೆ ಎಂದು ಹೇಳಬಹುದು ; ವರ್ಗಾವಣೆಯ ಸಮಯದಲ್ಲಿ ಇದ್ದ ಪ್ರೇಕ್ಷಕರ ಸಂಖ್ಯೆ ಒಂದು ಲಕ್ಷವಿದ್ದುದು ಇಂದು 12 ಲಕ್ಷ ಸಂಖ್ಯೆ ಮೀರಿದೆ.

ಈ ಮೃಗಾಲಯ ಅನೇಕಾನೇಕ ಅಪೂರ್ವ ಪ್ರಭೇದಗಳ ಸಂಖ್ಯೆಯನ್ನು ವೃದ್ಧಿಪಡಿಸಿದೆ ಮತ್ತು ಸ್ಥಳೀಯ ಹಾಗೂ ಹೊರದೇಶದ ಪ್ರಾಣಿಗಳ ಸಂತಾನಾಭಿವೃದ್ಧಿಗೆ ಸಹಾಯಮಾಡಿದೆ ; ಮತ್ತು ಭಾರತದ ಹಾಗೂ ಹೊರದೇಶಗಳ ಇತರ ಮೃಗಾಲಯಗಳಿಗೆ ಈ ಪ್ರಾಣಿ ಪಕ್ಷಿಗಳನ್ನು ನೀಡಿದೆ ; ವರ್ಗಾವಣೆಯ ಸಮಯದಲ್ಲಿದ್ದ 45 ಎಕ್ರೆ ಪ್ರದೇಶದ ವ್ಯಾಪ್ತಿ ಇಂದು 100 ಎಕರೆಗಳ ಗಡಿ ಮುಟ್ಟಿದೆ ; ಮತ್ತೆ 185 ಎಕರೆ ಪ್ರದೇಶವನ್ನು ಸೇರಿಸಲು ವ್ಯವಸ್ಥೆ ಮಾಡಲಾಗುತ್ತಿದ್ದು, ಪೂರ್ಣವಾಗಿ ಅಭಿವೃದ್ಧಿಗೊಂಡಾಗ ಇದರ ವಿಸ್ತಾರ 285 ಎಕರೆಗಳಾಗುತ್ತದೆ.

ಈ ಮೃಗಾಲಯದ ಸರ್ವತೋಮುಖ ಅಭಿವೃದ್ಧಿಗೆ ಸಿದ್ಧಪಡಿಸಲಾಗಿರುವ 'ಮಾಸ್ಟರ್ ಪ್ಲಾನ್' ಎಲ್ಲ ರೀತಿಗಳಲ್ಲಿಯೂ ನವೀನವಾಗಿದ್ದು ಇತರರು ಕೂಡ ಅದನ್ನು ಅನುಸರಿಸುವಂತಹ ರೀತಿಯಲ್ಲಿದೆ ಮೃಗಾಲಯ ಪ್ರಕಟಪಡಿಸಿರುವ ವೈಜ್ಞಾನಿಕ ಪ್ರಕಟಣೆಗಳನ್ನು ವಿಶ್ವದ ಎಲ್ಲೆಡೆಗಳಲ್ಲಿ ಅಂಗೀಕರಿಸಿ ಮೆಚ್ಚಿದ್ದಾರೆ.

[ಜನಪದ ವಾರಪತ್ರಿಕೆಯಿಂದ ಆಯ್ದದ್ದು]

★

ಪ್ರಾಣಿದಯಾಸಂಘ

ಬೆಂಗಳೂರು— ಈಚೆಗೆ ನಿಧನರಾದ ಪ್ರಾಣಿಬಂಧುಗಳಾಗಿದ್ದ ಡಾ|| ವೆಂಕಟಾಚಲಂ ಅವರು ತಮ್ಮ ಹಣ ಮತ್ತು ಮನೆಯನ್ನು ಪ್ರಾಣಿ ಕಲ್ಯಾಣಕ್ಕಾಗಿ ಟ್ರಸ್ಟ್ ಮೂಲಕ ಬಿಟ್ಟಿದ್ದಾರೆ ; ಅವರ ಮೃತ್ಯುಶಯ್ಯೆಯ ಹತ್ತಿರ ಒಂದು ಬೆಕ್ಕು ಮತ್ತು ಇನ್ನೊಂದು ಪ್ರಾಣಿ ವ್ಯಸನದಿಂದ ಕುಳಿತಿದ್ದವು

ಜಾನುವಾರುಗಳ ಪ್ರದರ್ಶನ

ಜಾನುವಾರುಗಳ ಉತ್ತಮ ತಳಿ ಅಭಿವೃದ್ಧಿ ಪಡಿಸಲು ಮತ್ತು ಅವುಗಳಿಗೆ ಉತ್ತಮ ಪಶಾರೋಗ್ಯ ಸೌಕರ್ಯಗಳನ್ನು ಕಲ್ಪಿಸುವ ಉದ್ದೇಶದಿಂದ ರಾಜ್ಯದ ಪಶುಸಂಗೋಪನ ಇಲಾಖೆಯು ಒಂದು ಜಾನುವಾರುಗಳ ಪ್ರದರ್ಶನವನ್ನು ರಾಯಚೂರು ಜಿಲ್ಲೆಯ ಶ್ರೀರಾಮನಗರದಲ್ಲಿ ಜನವರಿ 30, 1976 ರಂದು ಏರ್ಪಡಿಸಿದೆ

SHAKTI SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

ವುಡ್‌ಲಾಂಡ್ 24 I 75 ರಿಂದ

ಅವೋಘ ಆರಂಭ

ಮಿಸರ್ ರೋಮಿಯೋ

ಇದರ

ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಶಾಸ್ತ್ರಿ– ಶಶಿಕಪೂರ್, ರಂಗು ಜೈಸಾಲ್, ದಿನ 3 ಪ್ರದರ್ಶನಗಳು

ಅಪೆರಾ 31 I 75 ರಿಂದ

ಸಹಸ್ರ ತಿರಚ್ಚೀದ ಅಪೂರ್ವ ಚಿಂತಾಮಣಿ

ಅನೋಖ ಕನ್ನಡ ಚಿತ್ರ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ



Protect the Cow

Help The Gorakshana

—Humanitarian Propoganda Monthly—

Edited Printed and Published by Dharmapracharaprata M S. Krishna Rao (Proprietor) at the Satyavadi Press, Chamarajapuram Mysore